ಅವರ ಭೇಟಿ 'ದೊದಾನ್ ಬ್ಯಾರಕ್ಸ್'ನಲ್ಲಿ ನಡೆಯಿತು. ಅವರ ಎದುರಿಗೆ ಪರೇಡ್ ಮೈದಾನವಿತ್ತು. ಅಗರ್ಬಿಯ ಕೈಕುಲುಕುತ್ತಾ ಒಟೊಬಿ ತಮ್ಮ ಎದುರಿನ ಕುರ್ಚಿಯ ಕಡೆಗೆ ಕೈ ತೋರಿಸಿ ಮಾತನಾಡತೊಡಗಿದರು:

"ಇಗ್ನೇಶಿಯಸ್, ಮೊನ್ನೆ ತಾನೆ ನೀನು ಕಳುಹಿಸಿದ ಬಜೆಟ್ ರಿಪೋರ್ಟನ್ನು ಸಂಪೂರ್ಣವಾಗಿ ಓದಿದೆ. ಓದಿ, ನಿಜಕ್ಕೂ ನನಗೆ ದಿಗ್ಭ್ರಮೆಯಾಯಿತು. ಇನ್ನೂ ನಮ್ಮ ಮತ್ತು ಹೊರಗಿನ ಕಂಪನಿಗಳ ಮಧ್ಯೆ ಮಿಲಿಯನ್ ಡಾಲರ್‌ಗಳ ಲೆಕ್ಕದಲ್ಲಿ ಭ್ರಷ್ಟಾಚಾರ ನಡೆಯುತ್ತಿದೆ ಎಂದು ಓದಿದಾಗ, ಈ ಕುರಿತು ಏನು ಮಾಡುವುದೆಂದೇ ನನಗೆ ತೋಚಲಿಲ್ಲ, ಈ ಹಣ ಯಾರ ಜೇಬಿಗೆ ಹೋಗುತ್ತಿದೆ ಎಂಬುದನ್ನು ಅರಿಯಲು ನಾನು ಕಾತರನಾಗಿದ್ದೇನೆ."

ಇಗ್ನೇಶಿಯಸ್ ಅಗರ್ಬಿ ಕುರ್ಚಿಯ ಮೇಲೆ ಸೆಟೆದು ಕುಳಿತುಕೊಂಡ. ಅವನ ಕಣ್ಣುಗಳು ನೇರವಾಗಿ ಅಧ್ಯಕ್ಷರ ಕಣ್ಣುಗಳನ್ನು ಮಿಲಾಯಿಸಿದವು.

"ಸರ್, ನನ್ನ ಸಂಶೋಧನೆಯ ಪ್ರಕಾರ ಇದರಲ್ಲಿ ಬಹುಪಾಲು ಹಣ ಸ್ವಿಸ್ ಬ್ಯಾಂಕ್ ಖಾತೆಗಳಿಗೆ ಹೋಗುತ್ತಿದೆ. ಆದರೆ, ಇದನ್ನು ಸಾಬಿತುಪಡಿಸಲು ಈಗ ನನ್ನ ಬಳಿ ಯಾವುದೇ ಪುರಾವೆಗಳಿಲ್ಲ."

"ಸರಿ, ಈ ಬಗ್ಗೆ ಹೆಚ್ಚಿನ ವಿಷಯ ಕಲೆ ಹಾಕಲು ನಿನಗೆ ಏನು ಅಧಿಕಾರ ಬೇಕೋ ಅದನ್ನು ಈಗಿಂದೀಗಲೇ ಕೊಡುತ್ತೇನೆ. ನಿನಗೆ ಹೇಗೆ ಬೇಕೋ ಹಾಗೆ, ಮತ್ತು ನನ್ನ ಮಂತ್ರಿಮಂಡಲದ ಈಗಿನ ಅಥವ ಹಿಂದಿನ ಸದಸ್ಯರ ಬಗ್ಗೆ ನೀನು ತನಿಖೆ ನಡೆಸಬಹುದು. ಅವರು ಯಾರೇ ಆಗಿರಲಿ, ಎಷ್ಟೇ ದೊಡ್ಡ ಹುದ್ದೆಯಲ್ಲಿರಲಿ ಚೌಕಾಸಿ ಮಾಡುವ ಅಗತ್ಯವೇ ಇಲ್ಲ." ಎಂದರು.

"ಸರ್, ಈ ಬಗ್ಗೆ ನೀವು ನನಗೆ ಬರವಣಿಗೆಯಲ್ಲಿ ಆದೇಶ ಕೊಟ್ಟರೆ ಅನುಕೂಲವಾಗುತ್ತದೆ." ಎಂದ ಅಗರ್ಬಿ.

"ಸರಿ, ಆದೇಶ ಪತ್ರ ಸಂಜೆ ಆರು ಗಂಟೆಯ ಒಳಗೆ ನಿಮ್ಮ ಮೇಜಿನ ಮೇಲೆ ಇರುತ್ತದೆ."

"ಅಷ್ಟೇ ಅಲ್ಲ ಸರ್. ನಾನು ಹೊರಗಿನ ಸರ್ಕಾರಗಳನ್ನೂ ಸಂಪರ್ಕಿಸಬೇಕಾಗುತ್ತದೆ. ಅದಕ್ಕಾಗಿ ನಿಮ್ಮ ಅಧಿಕೃತ ಪರವಾನಗಿ ಪತ್ರವೂ ಬೇಕು."

"ಖಂಡಿತ. ಅದನ್ನೂ ಕಳಿಸುತ್ತೇನೆ." ಜನರಲ್ ಒಟೊಬಿ ಹೇಳಿದರು.

"ಥ್ಯಾಂಕ್ಯೂ ಸರ್." ಇಗ್ನೇಶಿಯಸ್ ಅಗರ್ಬಿ ಎದ್ದು ಹೊರನಡೆಯಲು ಅನುವಾದ.

ಜನರಲ್ ಒಟೊಬಿ ಕೂಡ ಎದ್ದು ಅವನೊಟ್ಟಿಗೆ ಬಾಗಿಲವರೆಗೆ ಬಂದು ಅವನ ಕೈ ಕುಲುಕುತ್ತಾ, ಮತ್ತೇನೋ ನೆನಪಾದವರಂತೆ, ತಮ್ಮ ಜೇಬಿಗೆ ಕೈ ಹಾಕಿ, "ಇಗ್ನೇಶಿಯಸ್, ನಿನಗೆ ಇದರ ಅಗತ್ಯ ಬೀಳಬಹುದು. ಜೋಪಾನವಾಗಿ ಇಟ್ಟುಕೊ. ನಿನಗೂ ನನ್ನಷ್ಟೇ ಶತ್ರುಗಳಿರಬಹುದೆಂದು ಭಾವಿಸುತ್ತೇನೆ!" ಎನ್ನುತ್ತಾ ಒಂದು ಪುಟ್ಟ ಸ್ವಯಂಚಾಲಿತ ರಿವಾಲ್ವರನ್ನು ಅಗರ್ಬಿಯ ಕೈಗಿತ್ತರು.

ನಡುಗುವ ಕೈಯಿಂದ ರಿವಾಲ್ವರನ್ನು ಪಡೆದು ಜೇಬಿಗಿಳಿಸಿ,

"ಥ್ಯಾಂಕ್ಯೂ ಸರ್." ಎನ್ನುತ್ತಾ ಅಗರ್ಬಿ ತನ್ನ ಕಚೇರಿಯ ಕಡೆಗೆ ಹೆಜ್ಜೆ ಹಾಕತೊಡಗಿದ.

ಸೆಂಟ್ರಲ್ ಬ್ಯಾಂಕ್ ಆಫ್ ನೈಜೀರಿಯಾದ ಗವರ್ನರ್ ಅಥವಾ ಬೇರೆ ಯಾವುದೇ ಅಧಿಕಾರಿಗಳೊಂದಿಗೆ ಸಮಾಲೋಚಿಸದೆ ಇಗ್ನೇಶಿಯಸ್ ಅಗರ್ಬಿ ಏಕಪಕ್ಷೀಯವಾಗಿ, ಗೋಪ್ಯದಿಂದ ಕೆಲಸಗಳನ್ನು ಶುರು ಮಾಡಿದ. ಹಗಲು ರಾತ್ರಿ ಎನ್ನದೆ ಶೋಧನೆಯಲ್ಲಿ ಮುಳುಗಿದ. ಮೂರು ತಿಂಗಳುಗಳ ಬಳಿಕ ಅವನು ಕಾರ್ಯಾಚರಣೆಗೆ ಸಿದ್ಧನಾಗಿದ್ದ.

ಆಗಸ್ಟ್ ತಿಂಗಳಿನಲ್ಲಿ ಇಗ್ನೇಶಿಯಸ್ ಅಗರ್ಬಿ ದೇಶದಿಂದ ಹೊರಗೆ ಹೋಗಲು ಸಿದ್ಧನಾಗಿದ್ದ. ಸಾಮಾನ್ಯವಾಗಿ ಆಗಸ್ಟ್ ತಿಂಗಳಿನಲ್ಲಿ ಬಹಳಷ್ಟು ನೈಜೀರಿಯನ್ನರು ಹೊರದೇಶಕ್ಕೆ ಹೋಗುವುದರಿಂದ ತನ್ನ ವಿದೇಶಿ ಪ್ರಯಾಣ ಜನರ ಗಮನ ಸೆಳೆಯಲಾರದೆಂದು ಅವನು ಅಂದಾಜಿಸಿದ್ದ.